**<u>ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿ.ಸಿ. ನಂ. 274/2018**

| | | | |
|---|---|---|---|
| **ಹೆಸರು** | **:** | **ಅಣ್ಣಾರಾವ** | **ಚಾ.ಸಾ. 14** |
| **ತಂದೆಯ ಹೆಸರು** | **:** | **ಬಂಡೇಪ್ಪ** | **ಪ್ರಾ.ಸಾ. 8** |
| **ವಯಸ್ಸು** | **:** | **59 ವರ್ಷ** | **ದಿನಾಂಕಃ 13-01-2025** |
| **ಉದ್ಯೋಗ** | **:** | **ಮ್ಯಾನೇಜರ, ಪಂಚಾಯತ ರಾಜ್** | |
| **ವಾಸಸ್ಥಳ** | **:** | **ಕಲಬುರಗಿ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ದಿನಾಂಕ 14-04-2016 ರಿಂದ ದಿನಾಂಕ 30-12-2021 ರವರೆಗೆ ಮ್ಯಾನೇಜರ ತಾಲ್ಲೂಕ ಪಂಚಾಯತ ಕಾರ್ಯಲಯದಲ್ಲಿ ಕಾರ್ಯನಿರ್ವಹಿಸಿದ್ದೇನೆ.

ಚಾಸಾ-1, 13, 15 ಮತ್ತು 18 ರವರು ನನಗೆ ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು. ಆರೋಪಿ ಮೊದಲು ಮ್ಯಾನೇಜರ ಆಗಿ ತಾಲ್ಲೂಕ ಪಂಚಾಯತ ಕಾರ್ಯಲಯ ಚಿಂಚೋಳಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

2015 ರಲ್ಲಿ ತಾಲ್ಲೂಕ ಪಂಚಾಯತ ಕಾರ್ಯಲಯದ ವತಿಯಿಂದ ತರಬೇತಿ ನಡೆಸುವ ಸಮಯಕ್ಕೆ ಆರೋಪಿ ಚೆಕಗಳನ್ನು ತಿದ್ದುಪಡಿ ಮಾಡಿದ್ದಾರೆ ಎಂದು ಬಸವರಾಜ ಮತ್ತು ದೇವಪ್ಪ ಎಂಬ ನಮ್ಮ ಕಾರ್ಯಲಯದಲ್ಲಿ ಕರ್ತವ್ಯ ಮಾಡುವ ವ್ಯಕ್ತಿಗಳು ನನಗೆ ತಿಳಿಸಿದ್ದಾರೆ. ಸದರಿ ಕೃತ್ಯದ ಕಾರಣ ಅಂದಾಜು ರೂ. 80,000/- ದಷ್ಟು ಸರಕಾರಕ್ಕೆ ನಷ್ಟವಾಗಿದೆ ಎಂದು ನನಗೆ ಗೊತ್ತಾಗಿರುತ್ತದೆ. ನಾನು ಆರೋಪಿಯ ಸಹಿ ನೋಡಿಲ್ಲ ಮತ್ತು ಗುರುತಿಸಲು ಆಗುವುದಿಲ್ಲ. ಸದರಿ ಕೃತ್ಯದ ಕಾರಣ ಆರೋಪಿಯ ವಿರುದ್ದ Disciplinary Enquiry ನಡೆದಿದ್ದು ಅದರಲ್ಲಿ ಆರೋಪಿಯ ವಿರುದ್ದ ಕೃತ್ಯ ಸಾಬೀತಾದ ಕಾರಣ ಆರೋಪಿಗೆ ಕೆಲಸದಿಂದ ವಜಾ ಮಾಡಲಾಯಿತು. ಆರೋಪಿ ತಾವು ನಷ್ಟ ಮಾಡಿದ ಹಣವಾದ ರೂ. 80,000/- ಹಣ ಮರುಪಾವತಿಸಿರುತ್ತಾರೆ ಎಂದು ನನಗೆ ಜಿಲ್ಲಾ ಪಂಚಾಯತ ಕಾರ್ಯಲಯದಲ್ಲಿ ಗೊತ್ತಾಗಿರುತ್ತದೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೋಲಿಸರು ನನಗೆ ವಿಚಾರಣೆ ಮಾಡಿಲ್ಲ.

**<u>ಪಾಟೀ ಸವಾಲುಃ ಆರೋಪಿ ಪರವಾಗಿ ವಕೀಲರು ಸಮಯ ಕೋರಿದ್ದು ಯಾವುದೇ ಕಾರಣ ಇಲ್ಲದಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸತಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**